**<u>ಸಾಕ್ಷಿಯನ್ನು ದಿನಾಂಕಃ 23-10-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>**

ನನಗೆ ವಾದಿಗಳು ಮೊದಲಿನಿಂದಲೂ ಪರಿಚಯ ಇರುವರು. ಅವರು ನನಗೆ ಸಂಬಂದಿಕರು ಆಗಬೇಕು. ದಾವಾ ಅಸ್ತಿ ಮೂಲತಃ 1 ನೇ ಪ್ರತಿವಾದಿಯ ಅಸ್ತಿಯಾಗಿತ್ತು. ಅವರ ಗಂಡನ ಹೆಸರು ಜುಟ್ಲಾ ಮಲ್ಲಪ್ಪ ಎಂದು ಇರುವುದು. ಅವರಿಗೆ ಹಲವಾಗಿಲು ಮಲ್ಲಪ್ಪ ಎಂದು ಕೂಡ ಕರೆಯುವರು. ಖರೀದಿ ಮಾಡುವ ಮೊದಲು ದಾವಾ ಅಸ್ತಿಯ ದಾಖಲೆಗನ್ನು ಪರಿಶೀಲನೆ ಮಾಡಿದ್ದೆನೆ. 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಪಹಣಿಯನ್ನು ನೋಡಿದ್ದೇನೆ. ಎಷ್ಟು ವರ್ಷಗಳ ಹಿಂದಿನ ಪಹಣಿಯನ್ನು ಪರಿಶೀಲನೆ ಮಾಡಿದ್ದೀರಿ ಅಂದರೆ ಅದು ನನ್ನ ಯಜಮಾನರಿಗೆ ಗೊತ್ತಿರುತ್ತದೆ ನನಗೆ ಗೊತ್ತಿರುವುದಿಲ್ಲ.

2. ವಾದಿಯರು ಯಾವ ಕಾರಣಕ್ಕಾಗಿ ಈ ದಾವೆಯನ್ನು ಮಾಡಿರುವರು ಎಂದು ನನಗೆ ಗೊತ್ತಿರುವುದಿಲ್ಲ. ವಾದ ಪತ್ರದಲ್ಲಿ ಬರೆದಿರುವ ವಿಚಾರಗನ್ನು ಮತ್ತು ಕೇಳಿರುವ ಪರಿಹಾರಗಳನ್ನು ನಾನು ನನ್ನ ವಕೀಲರನ್ನು ಕೇಳಿ ತಿಳಿದುಕುಾಂಡಿರುವುದಿಲ್ಲ. ಜುಟ್ಲಾ ಮಲ್ಲಪ್ಪ ಇವರು 1971 ರಲ್ಲಿ ಮೈನರ್ ನಾಗಮ್ಮ ಇವರ ಹೆಸರಿಗೆ ದಾನ ಪತ್ರವನ್ನ ಬರೆದುಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ. ನಾಗಮ್ಮ 1971 ರಲ್ಲಿ ಮೈನರ ಆಗಿದ್ದ ಕಾರಣ ಆಕೆಯ ಹಿತಾಸಕ್ತಿಯನ್ನು 1 ನೇ ಪ್ರತಿವಾದಿಯೇ ದಾನ ಪತ್ರದಲ್ಲಿ ಪ್ರತಿನಿದಿಸಿದ್ದರು ಅಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ನನಗೆ ನಾಗವ್ವನ ಪರಿಚಯ ಇರುವುದಿಲ್ಲ. ಆಕೆ 1974 ರಲ್ಲಿ ಪ್ರಾಪ್ತ ವೈಯಸ್ಸಿಗೆ ಬಂದ ನಂತರ ಸದರಿ ಅಸ್ತಿಯನ್ನು 1 ನೇ ಪ್ರತಿವಾದಿ ಹಾಗೂ ಆಕೆಯ ಗಂಡ ಮಲ್ಲಪ್ಪನ ಹೆಸರಿಗೆ ಜಂಟಿಯಾಗಿ ಖರೀದಿ ಪತ್ರವನ್ನು ಬರೆದುಕೊಟ್ಟಿರುವರು ಅಂದರೆ ನನಗೆ ಗೂತ್ತಿಲ್ಲ.

**ಸಾಕ್ಷಿಯ ಸಹಿ** **23.10.2025**

3. ದಾವಾ ಅಸ್ತಿಗೆ ಸಂಬಂದ ಪಟ್ಟಂತೆ ಕೈಬರಹದ ಪಹಣಿಗನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಮಲ್ಲಪ್ಪ ಬದುಕಿದ್ದಾಗ 1 ನೇ ಪ್ರತಿವಾದಿ ಹಾಗೂ ಆಕೆಯ ಗಂಡ ಲಿಂಗಾಯತಗೇರಿಯಲ್ಲಿ ವಾಸವಿದ್ದರು. ಮಲ್ಲಪ್ಪ ಯಾವಾಗ ಮೃತ ಪಟ್ಟರು ಎಂದು ನನಗೆ ಗೂತ್ತಿರುವುದಿಲ್ಲ. ಮರಿಯಮ್ಮ ಇವತ್ತಿಗೆ 3 ವರ್ಷಗಳ ಹಿಂದೆ ಮೃತ ಪಟ್ಟಿರುವರು. ನನ್ನ ಅಜ್ಜ ಮೃತ ಪಟ್ಟು ಸುಮಾರು 30 ವರ್ಷಗಳಾಗಿರಬಹುದು. ಅಜ್ಜ ಮೃತ ಪಟ್ಟ ನಂತರ ನನ್ನ ಅಜ್ಜಿ ಅಂದರೆ 1 ನೇ ಪ್ರತಿವಾದಿ ನಮ್ಮೊಂದಿಗೆ ವಾಸವಿದ್ದರು. ನನ್ನ ಅಜ್ಜಿ ಅಂದರೆ 1 ನೇ ಪ್ರತಿವಾದಿ ನಮ್ಮ ಮನೆಯಲ್ಲಿಯೇ ಮೃತ ಪಟ್ಟರು. ಆಕೆ ಸಾಯುವ ಮೊದಲು 25 ವರ್ಷಗಳಿಂದ ನಮ್ಮ ಜೊತೆ ನಮ್ಮ ಮನೆಯಲ್ಲಿ ವಾಸವಿದ್ದರು.

4. ಮಲ್ಲಪ್ಪರು 1981 ರಲ್ಲಿ 1 ನೇ ವಾದಿಯ ಗಂಡನಾದ ವಿರುಪಾಕ್ಷಪ್ಪನ ಹೆಸರಿಗೆ ಮರಣಶಾಸನವನ್ನು ಬರೆದು ಇಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಮರಣಶಾಸನಕ್ಕೆ ಮರಿಯಮ್ಮ ಅಂದರೆ 1 ನೇ ಪ್ರತಿವಾದಿ ಸಾಕ್ಷಿದಾರಳಾಗಿ ಸಹಿ ಮಾಡಿದ್ದಳು ಅಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮರಿಯಮ್ಮ ಆಕೆಯ ಗಂಡ ಮಲ್ಲಪ್ಪ ಬರೆದುಕೊಟ್ಟಿದ್ದ 1981 ನೇ ಸಾಲಿನ ಮರಣಶಾಸನವನ್ನು ಮರಿಯಮ್ಮ ಇವರು ರದ್ದು ಪರಿಡಿಸಿರುವರು ಅಂದರೆ ನನಗೆ ಗೂತ್ತಿಲ್ಲ. ವಿರುಪಾಕ್ಷಪ್ಪ ಯಾವಾಗ ಮೃತ ಪಟ್ಟರು ಎಂದು ನನಗೆ ಗೊತ್ತಿಲ್ಲ.

5. ದಾವಾ ಸ್ವತ್ತಿನ ವಿಚಾರವಾಗಿ ಕಂದಾಯ ನ್ಯಾಯಾಲಯಗಳಲ್ಲ್ಲೋ ಪಹಣಿ ವಿವಾದ ನಡೆದಿರುವ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಹೆಸರಿಗೆ ಖರಿದಿ ಪತ್ರ ಆದ ದಿನವೇ ಮರಿಯಮ್ಮಳು ಮರಣ ಶಾಸನವನ್ನು ರದ್ದು ಪಡಿಸಿರುವರು ಅಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ಅಧಾರದ ಮೇಲೆ ಮುಟೇಶನ ಆಗದಂತೆ ವಾದಿಗಳು ತೆಲಿಗಿ ನಾಡಕಚೇರಿಯಲ್ಲಿ ತಕರಾರನ್ನು ಸಲ್ಲಿಸಿದ್ದರು ಅಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಆ ಬಗ್ಗೆ ನಾಡಕಚೇರಿಯಲ್ಲಿ ಕೇಸು ನಡೆದು ನಾನೂ

ಕೂಡ ಪಕ್ಷಗಾರಳಾಗಿದ್ದೆನು ಅಂದರೆ ಸರಿ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹಿತ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ಮರಿಯವ್ವ, ಮಲ್ಲಪ್ಪ ಇವರು ವಿರೂಪಾಕ್ಷಪ್ಪನಿಗೆ ಸಂಬಂದಿಕರು ಅಂದರೆ ನನಗೆ ಗೊತ್ತಿಲ್ಲ. ಮರಿಯವ್ವ, ಮಲ್ಲಪ್ಪ ಇವರು ನನಗೆ ಸಂಬಂದಿಕರಾಗಬೇಕು. ಮರಿಯವ್ವ ಹಾಗೂ ಮಲ್ಲಪ್ಪ ವಿರುಪಾಕ್ಷಪ್ಪನ ಮನೆಯಲ್ಲಿ ವಾಸವಿದ್ದರು ಅಂದರೆ ಸರಿಯಲ್ಲ. ಮರಿಯಮ್ವ ಮತ್ತು ಮಲ್ಲಪ್ಪನಿಗೆ ಯಾವುದೇ ಸಂತಾನ ಇರಲಿಲ್ಲ ಅಂದರೆ ಸರಿ. ಆ ಕಾರಣ ಮರಿಯವ್ವ ಮತ್ತು ಮಲ್ಲಪ್ಪನ ಜವಾಬ್ದಾರಿಯನ್ನು ವಿರುಪಾಕ್ಷಪ್ಪನೇ ನೋಡಿಕೊಳ್ಳುತ್ತಿದ್ದನು ಅಂದರೆ ಸರಿಯಲ್ಲ. ವಿರೂಪಕ್ಷಪ್ಪನು 2015 ರಲ್ಲಿ ಮೃತ ಪಟ್ಟರು ಅಂದರೆ ನನಗೆ ಗೊತ್ತಿಲ್ಲ.

7. ನನ್ನ ತವರು ಮನೆ ದುಂಬಿಗೆರೆ ಆಗಿರುವುದು. ನನ್ನ ವಿವಾಹವಾಗಿ ಸುಮಾರು 35 ವರ್ಷಗಳಾದವು. ನನ್ನ ಗಂಡನ ಮನೆ ಎಡಿಹಳ್ಳಿಯಲ್ಲಿರುವುದು. ನಾನು, ವಿರುಪಾಕ್ಷಪ್ಪ ಮತ್ತು ಮರಿಯವ್ವ ಗಂಡ ಮಲ್ಲಪ್ಪ ಒಂದೇ ಗ್ರಾಮದಲ್ಲಿ ವಾಸವಿದ್ದೇವೆ ಅಂದರೆ ಸರಿಯಲ್ಲ. ವಿರುಪಾಕ್ಷಪ್ಪ ಮೃತ ಪಟ್ಟ ನಂತರ ನಾವು ದುರ್ಬೋದನೆ ಮಾಡಿ ಮರಿಯವ್ವ ಗಂಡ ಮಲ್ಲಪ್ಪಳನ್ನು ನಮ್ಮ ಮನೆಗೆ ಕರೆದುಕೊಂಡು ಹೋದೆವು ಅಂದರೆ ಸರಿಯಲ್ಲ. ನಾವು ಮರಿಯವ್ವ ಗಂಡ ಮಲ್ಲಪ್ಪನಿಗೆ ವಿಲ್ಲು ರದ್ದುಪಡಿಸಲು ಯಾವುದೇ ಕಾನೂನ್ಮಾಕ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹಿ ಕಾನೂನು ಬಾಹೀರವಾಗಿ ನಾವು ಮರಣಶಾಸನವನ್ನು ರದ್ದುಗೊಳಿಸಿದ್ದೇವೆ ಅಂದರೆ ಸರಿಯಲ್ಲ.

8. ಜಿ.ಶೇಖರಪ್ಪ ತಂದೆ ನಾಗಪ್ಪ ಎಡಿಹಳ್ಳಿ ಇವರ ಪರಿಚಯ ಇರವುದು. ರಾಮಾನಾಯ್ಕು ತಂದೆ ಬಿಕ್ಯಾನಾಯ್ಕು, ಸೇವಾನಗರ ಮತ್ತು ಬೀಮಾನಾಯ್ಕು ಇವರೂ ಕೂಡ ನನಗೆ ಗೊತ್ತು. ಅವರು ನಮ್ಮ ಊರಿನವರು ಆದ ಕಾರಣ ನನಗೆ ಪರಿಚಯ ಇರುವರು. ಶೇಖರಪ್ಪ ನಮ್ಮ

ಸಂಬಂಧಿಕರಾಗಿರುವುದಿಲ್ಲ. ಸದರಿಯವರು ಯಾವ ದಾಖಲೆಗೆ ಸಾಕ್ಷಿದಾರರಾಗಿ ಸ ಮಾಡಿರುವರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಜ್ಜಿ ಕರೆದುಕೊಂಡು ಬಂದು ಸಹಿ ಮಾಡಿಸಿರುವರು ಎಂದು ನುಡಿದರು. ನಾವು ಬರೆಸಿಕೊಂಡ ಖರೀದಿ ಪತ್ರಕ್ಕೂ ಸಹಿತ ಸದರಿಯವರೇ ಸಾಕ್ಷಿದಾರರಾಗಿ ಸಹಿ ಮಾಡಿರುವರು ಅಂದರೆ ಸರಿ.

9. ನಾನು ಉದ್ದೇಶ ಪೂರ್ವಕವಾಗಿ ದಾನ ಪತ್ರ ಮತ್ತು ಖರೀದಿ ಪತ್ರಗಳು ಆಗಿರುವ ವರ್ಷದ ಇಸಿ ದಾಖಲೆಗಳನ್ನು ಹಾಜರ ಪಡಿಸಿಸದೇ ಮರೆ ಮಾಚಿದ್ದೇವೆ ಅಂದರೆ ಸರಿಯಲ್ಲ. ನಿಡಿ 2 ರಲ್ಲಿ ವಿರುಪಾಕ್ಷಪ್ಪನಿಗೆ ವಿಲ್ಲನ್ನು ಬರೆದುಕೊಟ್ಟ ವಿಚಾರವನ್ನು ಉದ್ದೇಶಪೂರ್ಕವಾಗಿ ಕಾಣಿಸಿರುವುದಿಲ್ಲ ಅಂದರೆ ಸರಿಯಲ್ಲ. ಮಲ್ಲಪ್ಪ, ಮರಿಯವ್ವ ಇವರು ಜೀವಂತವಾಗಿದ್ದಲೂ ಸಹ ವಿರುಪಾಕ್ಷಪ್ಪ ದಾವಾ ಸ್ವತ್ತಿನ ಸ್ವಾಧೀನ ಅನುಭವವನ್ನು ಹೊಂದಿ ಸಾಗುವಳಿ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಮಲ್ಲಪ್ಪ ಮೃತ ಪಟ್ಟಾಗಿನಿಂದ ಹಿಡಿದು ಇಂದಿನವರೆಗೂ ದಾವಾ ಅಸ್ತಿಗಳು ವಿರುಪಾಕ್ಷಪ್ಪನ ಸ್ವಾದೀನ ಅನುಬವದಲ್ಲಿ ಇರುವುದು ಅಂದರೆ ಸರಿಯಲ್ಲ. ಮರಿಯವ್ವ ಯಾವತ್ತೂ ದಾವಾ ಅಸ್ತಿಯ ಸ್ವಾಧೀನ ಅನುಭವದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಇವತ್ತಿಗೂ ಕೂಡ ದಾವಾ ಅಸ್ತಿ ವಾದಿಯರ ಸ್ವಾಧೀನ ಅನುಭವದಲ್ಲಿ ಇರುವುದು ಅಂದರೆ ಸರಿಯಲ್ಲ.

10. ಪಹಣಿಯಲ್ಲಿ ಮರಿಯಮ್ಮನ ಹೆಸರು ಇರುವುದನ್ನು ದುರುಪಯೋಗ ಪಡಿಸಿಕೊಂಡು ನಾನು ಖರೀದಿ ಪತ್ರವನ್ನು ಸುಳ್ಳಾಗಿ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಮರಿಯಮ್ಮ ಅನಕ್ಷರಸ್ತೆ ಆಗಿದ್ದಳು ಅಂದರೆ ಸರಿ. ಆಕೆಗೆ ತಿಳುವಳಿಕೆಗೆ ಬಾರದಂತೆ ವಿಲ್ಲನ್ನು ರದ್ದುಗೊಳಿಸಿ ಖರೀದಿ ಪತ್ರವನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಖರೀದಿ ವ್ಯವಹಾರ ಮತ್ತು ಹಣದ ವ್ಯವಹಾರ ನಡೆದಿರುವುದಿಲ್ಲ ಮತ್ತು ಕೇವಲ ದಾಖಲೆಗಳಲ್ಲಿ ಮಾತ್ರ ವ್ಯವಹಾರ ನಡೆದಿದೆ ಎಂದು ಸುಳ್ಳಾಗಿ ಕಂಡು ಬರುತ್ತಿದೆ

ಅಂದರೆ ಸರಿಯಲ್ಲ. ಮರಿಯಮ್ಮಳಿಗೆ ವ್ಯವಹಾರದ ಬಗ್ಗೆ ನಾವು ಯಾವುದೇ ತಿಳುವಳಿಕೆಯನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಮರಿಯಮ್ಮ ಹೆಸರಿನಲ್ಲಿ ಪಹಣಿ ಇದ್ದಿದ್ದನ್ನು ದುರುಪಯೋಗ ಪಡಿಸಿಕೊಂಡು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಯಾವತ್ತೂ ದಾವಾ ಅಸ್ತಿಯ ಸ್ವಾಧೀನ ಅನುಭವದಲ್ಲಿ ಇರಲಿಲ್ಲ ಮತ್ತು ಈಗಲೂ ಇಲ್ಲ ಅಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )**

**ಓ ಹೇ ಕೇ ಸರಿಯಿದೆ.**

23-10-2025
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 23.10.2025